110 (441) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭೆ ಕ್ಷೇತ್ರದ ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬೋಗಸ್ ಚೆಕ್ ನೀಡಿ ಮೋಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಮೋಸದ ಸ್ವರೂಪವೇನು, ಸಂಪೂರ್ಣ ವಿವರ ನೀಡುವುದು;

ಇ) ಅಪರಾಧಿ ವಿರುದ್ಧ ದಾಖಲಿಸಲಾಗಿರುವ ಐಪಿಸಿ ಕಲಂಗಳೇನು ಹಾಗೂ ಈ ಐಪಿಸಿ ಕಲಂಗಳ ಸ್ವರೂಪವೇನು;

ಈ) ವಂಚಿತರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಅಪರಾಧಿಗಳ ವಿರುದ್ಧ ಯಾವ ಕ್ರಮಗಳನ್ನು ಜರುಗಿಸಲಾಗಿದೆ?

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಬಂದಿದೆ. ಈ ಸಂಬಂಧ ಬಿಡದಿ ಪೊಲೀಸ್ ಠಾಣೆಯ ಮೊ.ನಂ. 32/2010 ಕಲಂ 468 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಆ) ಬಿಡದಿ ಗ್ರಾಮದ ಸರ್ವೆ ನಂ.23/1 ರ ವಿಸ್ತೀರ್ಣ 1 ಎಕರೆ 30 ಗುಂಟೆ ಜಮೀನು ಸರ್ವಮಂಗಳ ಎಸ್.ವಿ. ಕೋಂ ಲೇಟ್ ಶ್ರೀ ಬಸವರಾಜಯ್ಯ, ಬಿಡದಿ ರವರ ಹೆಸರಿನಲ್ಲಿದ್ದು ದಿನಾಂಕ: 7-6-06 ರಂದು ಸದರಿ ಆಸ್ತಿಯನ್ನು ಎ.ಮಂಜುನಾಥ್ ಬಿನ್ ಲೇಟ್ ಅಳಗಿರಿಯಪ್ಪ, ಬಿಡದಿ ಮತ್ತು ವೀರಭದ್ರಯ್ಯ ಬಿನ್ ಲೇಟ್ ಚೌಡಪ್ಪ, ಪಿಚ್ಚಕುಂಟರಪಾಳ್ಯ ರವರುಗಳು ಸದರಿ ಮೇಲ್ಕಂಡ ಜಮೀನನ್ನು ಸರ್ವಮಂಗಳರವರಿಂದ ಕೊಂಡುಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಸದರಿ ಆಸ್ತಿಗೆ 1,50,75,000/= ರೂಪಾಯಿ ಒಪ್ಪಂದವಾಗಿ, ಮುಂಗಡವಾಗಿ ರೂ. 10,00,000 ನಗದು ಹಾಗೂ ರೂ.10,00,000 ಮುಖ ಬೆಲೆಯ ಎರಡು ಚೆಕ್ಕುಗಳನ್ನು ನೀಡಿದ್ದು ನಂತರ ಚೆಕ್ ನೀಡಿದ ಮಂಜುನಾಥ್ ರವರು ಹಣವನ್ನು ಕೊಡಬೇಡಿ ಎಂದು ಬ್ಯಾಂಕಿಗೆ ತಿಳಿಸಿದ್ದರಿಂದ ಈ ಚೆಕ್‌ಗಳು ನಗದೀಕರಣವಾಗಿರಲಿಲ್ಲ.

ಸದರಿ ಆಸ್ತಿಯನ್ನು ಕರಾರುದಾರರು ನಿಗದಿಪಡಿಸಿದ ಕಾಲಮಿತಿ (6 ತಿಂಗಳು) ಮುಗಿದರೂ ಸಹಿತ ಕ್ರಯಪತ್ರ ಮಾಡಿಸಿಕೊಳ್ಳಲಿಲ್ಲ. ನಂತರದ ಬೆಳವಣಿಗೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯು ಸ್ಯಾಟಲೈಟ್ ಬಸ್ ನಿಲ್ದಾಣದ ಉದ್ದೇಶಕ್ಕೆ ಭೂಸ್ವಾಧೀನಗೊಂಡಿರುತ್ತದೆ.

ಮೇಲ್ಕಂಡ ಖರೀದಿದಾರರು ಮತ್ತು ಜಮೀನು ಮಾಲೀಕರಾದ ಶ್ರೀಮತಿ ಸರ್ವಮಂಗಳ ರವರ ನಡುವೆ ವ್ಯವಹಾರ ಸರಿಹೊಂದದೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ.192/09 ರಲ್ಲಿ ಸಿವಿಲ್ ವ್ಯಾಜ್ಯ ನಡೆಯುತ್ತಿರುತ್ತೆ. ಈ ಮಧ್ಯೆ ಸದರಿ ಕೇಸ್‌ನಲ್ಲಿ ಪ್ರಸ್ತಾಪಿಸಲಾಗಿದ್ದ ದಾಖಲೆಗಳಲ್ಲಿ ತಲಾ ರೂ. 5,00,000/= 1ನೇ ಚೆಕ್ ಸಂಖ್ಯೆ 435333, 2ನೇ ಚೆಕ್ ಸಂಖ್ಯೆ 435334 ಕೆನರಾ ಬ್ಯಾಂಕ್ ಬಿಡದಿ ಶಾಖೆಯ ಚೆಕ್‌ಗಳಾಗಿದ್ದು ಹೆಸರಿಗೆ ನಗದಿಕರಣವಾಗಿರುವಂತೆ ಸದರಿ ಆರೋಪಿಗಳು ಬ್ಯಾಂಕ್ ಸ್ಟೇಟ್‌ಮೆಂಟನ್ನು ಸಿವಿಲ್ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಆದರೆ, ನಾನು ಈ ಚೆಕ್‌ಗಳನ್ನು ಪಡೆದು ಸಹಿ ಮಾಡಿ ಬ್ಯಾಂಕಿಗೆ ನೀಡಿ ಹಣ ಪಡೆದಿರುವುದಿಲ್ಲ. ಆರೋಪಿಗಳು ತನ್ನ ಸಹಿಯನ್ನು ನಕಲು ಮಾಡಿ ಹಣ ಪಡೆದಿರುತ್ತಾರೆ. ಇತ್ಯಾದಿ ಅಂತ ದೂರು ನೀಡಿರುತ್ತಾರೆ.

ಇ) ಕಲಂ 468 ಜೊತೆಗೆ 34 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಾಗಿದ್ದು, ಇದು NON BAILABLE ಪ್ರಕರಣವಾಗಿರುತ್ತೆ. ತೀವ್ರ ಸ್ವರೂಪದ್ದಾಗಿದೆ. ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಸೃಷ್ಟನೆ ಮಾಡುವ ವ್ಯಕ್ತಿಯು 7 ವರ್ಷಗಳವರೆಗಿನ ಕಾರಾವಾಸದಿಂದ ದಂಡಿತನಾಗುತ್ತಾನೆ ಹಾಗೂ ಜುಲ್ಮಾನೆಗೂ ಗುರಿಯಾಗುತ್ತಾನೆ.

ಈ) ಮೊ.ಸಂ. 32/10, ಕಲಂ 468 ಜೊತೆಗೆ 34 ಐ.ಪಿ.ಸಿ. ರೀತ್ಯಾ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿ ಆರೋಪಿಗಳು ದಿನಾಂಕ: 12.06–06 ರಂದು ಎಸ್.ವಿ. ಸರ್ವಮಂಗಳರವರ ಹೆಸರಿನಲ್ಲಿ ಬಿಡದಿ ಕೆನರಾ ಬ್ಯಾಂಕಿಗೆ ತಲಾ 5 ಲಕ್ಷ ರೂ.ಗಳ 2 ಚೆಕ್ ನಂಬರ್ 435333 ಮತ್ತು 435334 ಗಳನ್ನು ನೀಡಿ ಹಣ ಪಡೆದಿದ್ದ ಎನ್ನುವ ಚೆಕ್ ಗಳನ್ನು ಜೊತೆಗೆ ಇದೇ ಚೆಕ್‌ಗಳ ಜೊತೆ ಪಿರ್ಯಾದಿ ಎಸ್.ವಿ.ಸರ್ವಮಂಗಳ ರವರ ಮೈದುನ ಬಿ.ಪಿ.ಪ್ರಭುದೇವ್ ರವರಿಗೆ ನೀಡಿದ್ದ ತಲಾ 5 ಲಕ್ಷ ರೂ.ನ ಬಿ.ಪಿ.ಪ್ರಭುದೇವ್ ರವರ ಹೆಸರಿನ 435335 ಮತ್ತು 435336 ಒಟ್ಟು 4 ಚೆಕ್ ಗಳನ್ನು ಬಿಡದಿ ಕೆನರಾ ಬ್ಯಾಂಕ್‌ನವರಿಂದ ಪಡೆದು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಪಿರ್ಯಾದುದಾರರ ಮತ್ತು ಬಿ.ಪಿ.ಪ್ರಭುದೇವ್‌ರವರ ಮಾದರಿ

ಸಹಿ, ಅಸಲು ಸಹಿ ಹಾಗೂ ಆರೋಪಿಗಳಾದ ಎ.ಮಂಜುನಾಥ ಮತ್ತು ವೀರಭದ್ರಯ್ಯ ರವರಿಂದ ಪಿರ್ಯಾದುದಾರರ ಮತ್ತು ಬಿ.ಪಿ.ಪ್ರಭುದೇವ್ ರವರು ರುಜು ಮಾಡುವ ರೀತಿಯಲ್ಲಿ ಅವರುಗಳಿಂದ ಸಹಿ ಪಡೆದು ಚೆಕ್‌ನಲ್ಲಿರುವ ಸಹಿಗೂ ಮತ್ತು ತನಿಖಾ ಕಾಲದಲ್ಲಿ ಪಡೆದಿರುವ ಸಹಿಗಳಿಗೂ ಪರೀಕ್ಷೆ ಮಾಡಿ ವರದಿ ನೀಡಲು ಕೋರಿ ಬೆಂಗಳೂರು ಎಫ್.ಎಸ್.ಎಲ್ ತಜ್ಞರ ಬರವಣಿಗೆ ತಜ್ಞರಲ್ಲಿಗೆ ಕಳುಹಿಸಿಕೊಡಲಾಗಿದೆ. ಎಫ್.ಎಸ್.ಎಲ್. ಕಛೇರಿಯ ಕೈಬರಹ ವಿಭಾಗದ ಕ್ರಮ ಸಂಖ್ಯೆ: ಎಫ್.ಎಸ್.ಎಲ್. ಕ್ಯೂಡಿ: 2010ರ ವರದಿಯನ್ನು ದಿನಾಂಕ: 22–07–2010 ಕ್ಕೆ ನೀಡುವುದಾಗಿ ಸ್ವೀಕೃತಿ ನೀಡಿರುತ್ತಾರೆ. ಎಫ್.ಎಸ್.ಎಲ್. ನವರಿಂದ ವರದಿಯು ಬರಬೇಕಾಗಿರುತ್ತದೆ. ಸಾಕ್ಷಿದಾರರ ವಿಚಾರಣೆ ನಡೆಸಿರುತ್ತೆ, ತನಿಖೆ ಮುಂದುವರೆದಿದೆ. ಎಫ್.ಎಸ್.ಎಲ್. ನವರಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಂಡು, ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುವುದು.

ಮಾಗಡಿ ತಾಲ್ಲೂಕಿಗೆ ಒಂದು ಪೊಲೀಸ್ ಹೊರ ಠಾಣೆ ಪ್ರಾರಂಭಿಸುವುದು.

112 (443) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದ ಸುತ್ತಮುತ್ತ ದಿನೇ ದಿನೇ ಕೊಲೆ ಸುಲಿಗೆಗಳು ಹೆಚ್ಚಾಗುತ್ತಿದ್ದು, ಈ ಪ್ರದೇಶದಲ್ಲಿ ಒಂದು ಪೊಲೀಸ್ ಹೊರಠಾಣೆ (Out Post) ಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ;

ಆ) ಈ ಅರಣ್ಯ ಪ್ರದೇಶದ ಸುತ್ತಲೂ 15 ಕಿ.ಮೀ. ವ್ಯಾಪ್ತಿಯಲ್ಲಿ ಪೊಲೀಸ್ ಠಾಣೆ ಇಲ್ಲದೆ ಇರುವುದರಿಂದ ಸುತ್ತಮುತ್ತಲ ಸುಮಾರು 50 ಹಳ್ಳಿಗಳ ಜನರು ಭಯಬೀತಿಯಿಂದ ಜೀವನ ನಡೆಸಬೇಕಾಗಿದ್ದು, ಇದೊಂದು ಗಂಭೀರವಾದ ವಿಷಯವಾಗಿರುವುದರಿಂದ ಇನ್ನೆಷ್ಟು ದಿನದಲ್ಲಿ ಈ ಪೊಲೀಸ್ ಹೊರಠಾಣೆಯನ್ನು ಪ್ರಾರಂಭಿಸಲಾಗುವುದು?

ಶ್ರೀ ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) :

ಅ) ಮತ್ತು ಆ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿ ಪೊಲೀಸ್ ಹೊರಠಾಣೆಯ ಅವಶ್ಯಕತೆ ಇರುತ್ತದೆ. ಇಲ್ಲಿಗೆ ಹೊರಠಾಣೆಯ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲು ಪರಿಶೀಲಿಸ ಲಾಗುವುದು.